## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 1413/2020

ಪ್ರಾಸಾ : 16
ಚಾಸಾ : 21

| | | |
|---|---|---|
| ಹೆಸರು | : | ಎ ರಾಮಣ್ಣ ಗೌಡ |
| ತಂದೆಯ ಹೆಸರು | : | ಎ ಶೇಷಾಗೌಡ |
| ಪ್ರಾಯ | : | 61 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸಸ್ಥಳ | : | ಪುತ್ತೂರು |

---

ದಿನಾಂಕಃ **16.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

---

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು **2017** ರಿಂದ **2020** ವರೆಗೆ ವಿಟ್ಲ ಪೊಲೀಸು ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 21.05.2020 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ತಂದುಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಅಪರಾಧ ಕ್ರ. ಸಂಖ್ಯೆ 86/2020 ರಂತೆ ಪ್ರ ವ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿ-1 ದೂರನ್ನು ಹಾಗೂ ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದು

ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ತಕ್ಷಿರು ಸ್ಥಳಕ್ಕೆ ಬೇಟಿ ನೀಡಿದ್ದು ಚಾಸಾ-1 ರವರು ತೋರಿಸಿಕೊಟ್ಟ ಸ್ಥಳವನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ-2 ಸ್ಥಳ ಪಂಚನಾಮೆಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ಹಸ್ತಾಂತರಿಸಿರುತ್ತೇನೆ.

## ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಟಿ ಆರ್ ವಕೀಲರಿಂದಃ

2. ದಿ. 21.05.2020 ರಂದು ನಾನು ಬೆಳಗ್ಗೆ 8.00 ಗಂಟೆಗೆ ಸಮಯದಲ್ಲಿ ಠಾಣೆಗೆ ಹಾಜರಾಗಿರುತ್ತೇನೆ. ನಾನು ಠಾಣೆಗೆ ಬಂದಾಗ ಚಾಸಾ-1 ರವರು ಠಾಣೆಯಲ್ಲಿ ಇದ್ದರು . ನಿಪಿ-1 ದೂರನ್ನು ಚಾಸಾ-1 ರವರು ಹೇಳಿದಂತೆ ನಾನು ತಯಾರಿಸಿರುತ್ತೇನೆ. ಚಾಸಾ-1 ರವರ ಜೊತೆ ಒಬ್ಬರು ಠಾಣೆಗೆ ಬಂದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ತಕ್ಷಿರು ಸ್ಥಳಕ್ಕೆ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಬೈಕಿನಲ್ಲಿ ನಾನು ಒಬ್ಬನೇ ಹೋಗಿರುತ್ತೇನೆ. ಠಾಣೆಯಿಂದ ತಕ್ಷಿಃರು ಸ್ಥಳಕ್ಕೆ ಸುಮಾರು 3 ಕಿ.ಮೀ ಅಂತರ ಇದೆ. ತಕ್ಷಿರು ಸ್ಥಳದಲ್ಲಿ ಸುಮಾರು ಒಂದು ಗಂಟೆ ಸಮಯ ಇದ್ದೇ. ತಕ್ಷಿರು ಸ್ಥಳಕ್ಕೆ ಬರುವಂತೆ ಪಂಚರಿಗೆ ನೋಟಿಸು ನೀಡಿರುತ್ತೇನೆ. ಯಾವ ಸಮಯದಲ್ಲಿ ನೋಟಿಸು ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ಪಂಚರಲ್ಲಿ ಒಬ್ಬರನ್ನು ವಿಟ್ಲ ಪೇಟೆಯಿಂದ ಹಾಗೂ ಮತ್ತೊಬ್ಬರನ್ನು ಕುಂಡಡ್ಕ ದಿಂದ ಬರಮಾಡಿಕೊಂಡಿರುತ್ತೇನೆ. ನಿಪಿ-2 ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ನಾನು ತಕ್ಷಿರು ಸ್ಥಳಕ್ಕೆ ಹೋಗಿಲ್ಲ

ಎಂದರೆ ಸರಿಯಲ್ಲ. ನಾನು ತಕ್ಷಿರು ಸ್ಥಳದ ಮಹಜರ ಮಾಡಿಲ್ಲ ಎಂದರೆಸ ರಿಯಲ್ಲ. ಠಾಣೆಯಲ್ಲಿ ಕುಳಿತು ನಿಪಿ-2 ಮಹಜರನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ